ಸಿಸಿ ಸಂಃ237/2017 ಪಿಡಬ್ಲ್ಯೂ1

ದಿನಾಂಕಃ 20-11-2019

ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲು ಆರೋಪಿ ಪರ ವಕೀಲರಿಂದಃ

ದೊಂದರಘಟ್ಟ ಗ್ರಾಮದ ಹಳೇ ಸರ್ವೆ ನಂ.28/ಪಿ1 ಎಂದರೆ ಸರಿ. ಸದರಿ ಸರ್ವೆ ನಂಬರ್ ಜಮೀನಿನ ವಿಸ್ತೀರ್ಣ 2 ಎಕರೆ 14 ಗುಂಟೆ ಎಂದರೆ ಸರಿ. ಸದರಿ ಸರ್ವೆ ನಂಬರ್ ನ ಹೊಸ ಸರ್ವೆ ನಂ. 177/1 ಎಂದರೆ ಸರಿ. ಸದರಿ ಸರ್ವೆ ನಂಬರ್ ನಲ್ಲಿ ಇಬ್ಬರು ವ್ಯಕ್ತಿಗಳ ಹೆಸರಿನಲ್ಲಿ ಪಹಣಿ ಇರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರ್ ಪೈಕಿ 1 ಎಕರೆ 20 ಗುಂಟೆ ಜಮೀನು ಆರೋಪಿಯ ಹೆಸರಿಗೆ ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರ್ ನಲ್ಲಿ ಆರೋಪಿಯ ಅಕ್ಕ ಶಕುಂತಲಾ ಬಾಯಿ ರವರಿಗೆ 34 ಗುಂಟೆ ಜಮೀನು ಹೋಗಿರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಪಹಣಿಯಲ್ಲಿ ಶಕುಂತಲಾ ಬಾಯಿ ಮತ್ತು ಆರೋಪಿಯ ಹೆಸರಿಗೆ ಜಂಟಿ ಖಾತೆ ಇದೆ ಎಂದರೆ ಸರಿ. ಸದರಿ ಸರ್ವೆ ನಂಬರ್ ಗೆ ಸಂಬಂದಿಸಿದಂತೆ ಖಾತೆ ನಮ್ಮ ಕಚೇರಿಯಿಂದ ಆಗಿರುತ್ತದೆ ಎಂದರೆ ಸರಿ. ಪಹಣಿಯಲ್ಲಿ 1 ರಿಂದ 12 ನೇ ಕಾಲಂಗಳಲ್ಲಿ ನಮೂದಿಸಿರುವ ಮಾಹಿತಿಗಳು ನಮ್ಮ

ಕಚೇರಿಯಿಂದ ನಮೂದಿಸಿದವು ಎಂದರೆ ಸರಿ. ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಗೂ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಪಹಣಿಯಲ್ಲಿನ ಅಂಶಗಳನ್ನು ನಮ್ಮ ಕಚೇರಿಯವರು ನಮೂದು ಮಾಡಿದ್ದು ಅವರ ತಪ್ಪಿನಿಂದ ತಪ್ಪಾಗಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಮ್ಯುಟೇಶನ್ ಆದೇಶ ನಂ.ಆರ್ ಆರ್ ಟಿ ಸಿ ಆರ್1379/2010-11 ಎಂದರೆ ಸರಿ. ಸದರಿ ಆದೇಶ ನಮ್ಮ ಕಚೇರಿಯಿಂದ ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿರುವ ಸಹಿ ಗ್ರಾಮ ಲೆಕ್ಕಾಧಿಕಾರಿಗಳದು ಎಂದರೆ ಸರಿ. ಸದರಿ ಮ್ಯುಟೇಶನ್ ಗೆ ನನ್ನ ಸಹಿ ಇರುತ್ತದೆ ಎಂದರೆ ಸರಿಯಲ್ಲ. ಮ್ಯುಟೇಶನ್ ನಲ್ಲಿ ಬರೆದಿರು ವಿಸ್ತೀರ್ಣಗಳನ್ನು ನಮ್ಮ ಕಚೇರಿಯವರು ಬರೆದಿರುತ್ತಾರೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

ಚನ್ನಗಿರಿ